ದಿನಾಂಕಃ 06-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದಃ**

ನನಗೆ ಈ ದಾವೆಯ ಪ್ರತಿವಾದಿ ಸುಮಾರು 25 ವರ್ಷಗಳಿಂದ ಪರಿಚಿತ. ಸದರಿಯವರ ತಂದೆಯ ಹೆಸರು ನಿಂಗಪ್ಪ. ಪ್ರತಿವಾದಿಗೆ ಒಟ್ಟು 5 ಎಕರೆ ಜಮೀನು ಇದ್ದು ಅದರಲ್ಲಿ 2 ಎಕರೆ ಬೀಳು ಬಿಟ್ಟಿರುತ್ತಾರೆ, ಸದರಿ ಜಮೀನಿನ ಸರ್ವೆ ನಂ ಮತ್ತು ವಿಸ್ತೀರ್ಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಜಮೀನುಗಳ ವಿಸ್ತೀರ್ಣದ ಕುರಿತು ನನ್ನ ಪ್ರ.ಪತ್ರದಲ್ಲಿ ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ನನಗೆ ವಾದಿಯ ತಂದೆಯಾದ ಮಂಜಪ್ಪ ನಮ್ಮ ಪಕ್ಕದ ಊರಿನವರಾದ ಕಾರಣ ನನಗೆ 10-12 ವರ್ಷಗಳಿಂದ ಪರಿಚಿತರು. ನಾನು ಸದರಿ ಮಂಜಪ್ಪನವರ ಮನಗೆ ಯಾವತ್ತಿಗೂ ಹೋಗಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಯ ಜೊತೆಗೆ ಒಮ್ಮೆ 2013ರಲ್ಲಿ ವಾದಿಯ ತಂದೆಯಿಂದ ಪ್ರತಿವಾದಿ 45 ಸಾವಿರ ರೂ.ಗಳನ್ನು ಸಾಲವಾಗಿ ಪಡೆದಿದ್ದು ಸದರಿ ವಿಚಾರವಾಗಿ ನಾನು ಪ್ರತಿವಾದಿಯೊಂದಿಗೆ ವಾದಿಯ ತಂದೆಗೆ ಮನೆಗೆ ಹೋಗಿದ್ದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ವಾದಿಯ ತಂದೆಯಿಂದ ಯಾವ ವಿಚಾರಕ್ಕಾಗಿ ಸದರಿ ಹಣವನ್ನು ಪಡೆದರು ಎಂದು ನನಗೆ ಗೊತ್ತಿಲ್ಲ. ಸದರಿ ಹಣದ ವ್ಯವಹಾರದ ಸಮಯಕ್ಕೆ ನಾನು ಮತ್ತು 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. 1ನೇ ಪ್ರತಿವಾದಿ ನಮ್ಮ ಪಕ್ಕದ ತೋಟದವರಾದ ಕಾರಣ ಪ್ರತಿದಿನ ಭೇಟಿಯಾಗಿ ಮಾತನಾಡುತ್ತಿದ್ದು ಸದರಿ ಸಾಲಿನಲ್ಲಿ ವಾದಿಯ ತಂದೆಯ ಮನೆಗೆ ಸಾಲವನ್ನು ಪಡೆಯುವ ವಿಚಾರವಾಗಿ ನನಗೆ ತಿಳಿಸಿ ಕರೆದುಕೊಂಡು ಹೋಗಿರುತ್ತಾರೆ.

1ನೇ ಪ್ರತಿವಾದಿಯ ಅಡಿಕೆ ತೋಟ ಸುಮಾರು 30 ವರ್ಷಕ್ಕಿಂತ ಹಳೆಯದು. ಸದರಿ ಅಡಿಕೆ ತೋಟದಿಂದ ಎಷ್ಟು ಆದಾಯವಿದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ 1ನೇ ಪ್ರತಿವಾದಿಗೆ 2ವರೆ ಎಕರೆ ಅಡಿಕೆ ತೋಟವಿದೆ. ಅಂದಾಜು 1 ಎಕರೆ ಅಡಿಕೆ ತೋಟದಲ್ಲಿ ಒಂದು ವರ್ಷಕ್ಕೆ 10-12 ಕ್ವಿಂಟಾಲ್ ಬರುತ್ತದೆ ಎಂದರೆ ಸಾಕ್ಷಿ ಕನಿಷ್ಠ 2ವರೆ ಯಿಂದ 3 ಕ್ವಿಂಟಾಲ್ ಗರಿಷ್ಠ 10 ಕ್ವಿಂಟಾಲ್ ವರೆಗೂ ಬರಬಹುದು ಎಂದು ನುಡಿಯುತ್ತಾರೆ. ಸದರಿ ತೋಟದಲ್ಲಿ ಅವರಿಗೆ ಆದಾಯ ಈಗಲೂ ಬರುತ್ತದೆ ಎಂದರೆ ಸರಿ. ಹಾಗಾಗಿ 1ನೇ ಪ್ರತಿವಾದಿಗೆ ಹಣಕಾಸಿನ ತೊಂದರೆ ಆಗಿರಲಿಲ್ಲ ಎಂದರೆ ಸರಿಯಲ್ಲ. 2013ರಲ್ಲಿ ಆದ ಹಣಕಾಸಿನ ತೊಂದರೆ ಕುರಿತು 1ನೇ ಪ್ರತಿವಾದಿ ನನ್ನ ಬಳಿ ಹೇಳಿರುತ್ತಾರೆ. ನಿರ್ದಿಷ್ಟ ತಿಂಗಳು ನನಗೆ ಹೇಳಲಾಗುವುದಿಲ್ಲ. 1ನೇ ಪ್ರತಿವಾದಿವಾದಿಯಿಂದ ಸಾಲ

ಕೇಳಿದ್ದ ವಿಚಾರವನ್ನು ನನಗೆ ಸದರಿ ಸಾಲ ಪಡೆಯುವ ದಿನದಿಂದ ಒಂದು ವಾರದ ಮುಂಚಿತವಾಗಿ ಹೇಳಿರುತ್ತಾರೆ. ಸದರಿ ವಿಚಾರವನ್ನು ನನ್ನ ಪ್ರ.ಪತ್ರದಲ್ಲಿ ನಮೂದಿಸಿಲ್ಲ.

ನಾನು ವಾದಿಯ ತಂದೆಯ ಮನೆಗೆ ಸರಿ ಸುಮಾರು 12.00 ಗಂಟೆಗೆ 1ನೇ ಪ್ರತಿವಾದಿಯೊಂದಿಗೆ ಹೋಗಿರುತ್ತೇನೆ. ವಾದಿಯ ತಂದೆಗೆ ನಾವು ಎಷ್ಟು ಹೊತ್ತಿಗೆ ಅವರ ಮನೆಗೆ ಬರುತ್ತೇವೆ ಎಂದು ನನ್ನ ಸಮಕ್ಷಮ ತಿಳಿಸಿರಲಿಲ್ಲ. ಸದರಿ ವಾದಿಯ ತಂದೆಯ ಮನೆ ಹೆಬ್ಬಳಗೆರೆಯ ದೇವಸ್ಥಾನದ ಪಕ್ಕದ ಬಿಲ್ ಪತ್ರೆ ಮರದ ಪಕ್ಕ ಮನೆ ಇದೆ. 1ನೇ ಪ್ರತಿವಾದಿ ಪಡೆದ ಸಾಲವನ್ನು ಎಷ್ಟು ಅವಧಿಯೊಳಗೆ ಮರುಪಾವತಿಸುವುದಾಗಿ ತಿಳಿಸಿದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸದರಿ ವಿಚಾರದ ಬಗ್ಗೆ ನನ್ನ ಪ್ರ.ಪತ್ರದಲ್ಲೂ ಕೂಡ ತಿಳಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಸದರಿ ದಿನಾಂಕದಂದು ವಾದಿಯ ತಂದೆಗೆ ಸಾಲದ ಭದ್ರತೆಗಾಗಿ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿರುವುದಿಲ್ಲ. ಅದೇ ರೀತಿ ವಾದಿಯ ತಂದೆಯೂ ಸಹ 1 ನೇ ಪ್ರತಿವಾದಿಗೆ ಸಾಲದ ಭದ್ರತೆಗಾಗಿ ದಾಖಲೆಯನ್ನು ಬರೆದುಕೊಡುವಂತೆ ಏನೂ ಕೇಳಲಿಲ್ಲ. ವಾದಿಯ ತಂದೆ 1 ನೇ ಪ್ರತಿವಾದಿಗೆ ನನ್ನ ಸಮಕ್ಷಮ ಸದರಿ ಸಾಲದ ಮೊತ್ತವನ್ನು ಮರುಪಾವತಿಸುವಂತೆ ಕೇಳಿಲ್ಲ ಎಂದರೆ ಸರಿ.

ಈ ದಾವೆಯನ್ನು ವಾದಿ 1ನೇ ಪ್ರತಿವಾದಿಯ 27 ಗುಂಟೆ ಜಮೀನಿಗಾಗಿ ಹೂಡಿರುತ್ತಾರೆ. ಅದನ್ನು ಬಿಟ್ಟು ಬೇರೆ ಆಸ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ನನಗೆ ಯಾವುದೇ ಮಾಹಿತಿಯನ್ನು ಸಹ ತಿಳಿಸಿಲ್ಲ. ಹಾಗಾಗಿ ವಾದಿ ದಾವಾಸ್ತಿಯ ಮೇಲೆ ಹಕ್ಕು ಕೇಳುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.ಸದರಿ ದಾಖಲೆಗಳ ಕುರಿತು ನನಗೆ ಗೊತ್ತಿಲ್ಲ, ಸದರಿ ದಾಖಲೆಗಳನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂಬ ವಿಚಾರವೂ ಸಹ ನನಗೆ ಗೊತ್ತಿಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನಾನು ನನ್ನ ಪ್ರ.ಪತ್ರದಲ್ಲಿ ಯಾವುದೇ ವಿಚಾರವನ್ನು ಬರೆಸಿಲ್ಲ ಎಂದರೆ ಸಾಕ್ಷಿ ಅಧಾರ ಪತ್ರದ ಕುರಿತು 2015ರಲ್ಲಿ ವಾದಿಯ ತಂದೆ 1 ನೇ ಪ್ರತಿವಾದಿಗೆ ಕೇಳಿದಕುರಿತು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಅಧಾರ ಪತ್ರವನ್ನು ನಾನು ನೋಡಿಲ್ಲ. ಹಾಗಾಗಿ ಸದರಿ ಪತ್ರ ಆಧಾರಪತ್ರವೋ ಅಥವಾ ಬೇರೆ ಪತ್ರವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿ 2017ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ಈ ದಾವೆಯನ್ನು ವಾದಿ ಯಾವ ಸಾಲಿನಲ್ಲಿ ದಾಖಲಿಸಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ ಈ ದಾವೆ ದಾಖಲಿಸಿದ ಮೇಲೆ ಸದರಿ 1 ನೇ ಪ್ರತಿವಾದಿಯ ಮೇಲೆ ನೋಟಿಸು ಜಾರಿಯಾದ ಕುರಿತಾಗಲಿ ಮತ್ತು ಸದರಿಯವರು ಸಲ್ಲಿಸಿದ ತಕರಾರಿನ ಕುರಿತಾಗಲಿ ನನಗೆ ಯಾವುದೇ ಮಾಹಿತಿ ಇಲ್ಲ. ವಾದಿಯ ತಂದೆಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧವಿಲ್ಲದೆ ಇದ್ದರು ಸಹ ನಾನು ವಾದಿಯ ಮಾತನ್ನು ಕೇಳಿ ಸುಳ್ಳು ಪ್ರ.ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಅದೇ ರೀತಿ ವಾದಿಯ ತಂದೆಗೂ, 1ನೇ ಪ್ರತಿವಾದಿಗೂ ಯಾವುದೇ ಹಣಕಾಸಿನ ವ್ಯವಹಾರ ನಡೆಯದೆ ಇದ್ದರು ಸಹ ನಾನು ಪ್ರತಿವಾದಿ 1(ಸಿ) ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಆಧಾರಪತ್ರದ ಬದಲಿಗೆ ಕ್ರಯ ಕರಾರುಪತ್ರವನ್ನು ಮಾಡಿಸಿಕೊಂಡ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರು ಸಹ ಪ್ರತಿವಾದಿ 1(ಸಿ) ಯವರ ಮಾತನ್ನು ಕೇಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪ್ರತಿವಾದಿ 1(ಡಿ) 1ನೇಪ್ರತಿವಾದಿಯ ಮಗ ಎಂದರೆ ಸರಿ. ಸದರಿಯವರು ಈ ದಾವೆಗೆ ಸಲ್ಲಿಸಿರುವ ತಕರಾರಿನ ಬಗೆಗ ನನಗೆಮಾಹಿತಿ ಇಲ್ಲ. ಅದೇ ರೀತಿ ಪ್ರತಿವಾದಿ 1(ಬಿ) ರವರು ವಾದಿಯ ತಂದೆ 1 ನೇ ಪ್ರತಿವಾದಿಯಿಂದ ಅಧಾರಪತ್ರದ ಬದಲಿಗೆ ಸುಳ್ಳು ಕ್ರಯಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂಬ ವಿಚಾರವನ್ನು ಸಹ ನನಗೆ ತಿಳಿಸಿಲ್ಲ ಎಂದರೆ ಸರಿ. ಸದರಿ ಪ್ರತಿವಾದಿ 1 ಮತ್ತು 1(ಬಿ) ಪ್ರತಿವಾದಿಗಳು ವಾದಿಗೆ ಕರಾರುಪತ್ರವನ್ನು ಮಾಡಿಕೊಟ್ಟಿರುವ ವಿಚಾರ ಸತ್ಯವಾಗಿರುವುದಾಗಿರುವುದೇ ನನಗೆ ಸದರಿ ವಿಚಾರವನ್ನ ತಿಳಿಸಿಲ್ಲ ಎಂದರೆ ಸಾಕ್ಷಿ ಸದರಿ ಪ್ರತಿವಾದಿ 1 (ಬಿ) ರವರು ಸದರಿ ವಿಚಾರದ ಕುರಿತು ನನಗೆ ಯಿವೂದೇ ವಿಚಾರವನ್ನು ತಿಳಿಸಿಲ್ಲ ಎಂದು ನಡಿಯುತ್ತಾರೆ. ವಾದಿಗೆ ತೊಂದರೆಕೊಡುವ ಉದ್ದೇಶದಿಂದ ಪ್ರತಿವಾದಿ1(ಸಿ) ರವರು ಮಾಹಿತಿ ಹೇಳಿಕೆಯಂತೆ ನಾನು ಸುಳ್ಳು ಸಾಕ್ಷಿನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.